ಅವನ ಜೊತೆ ಹೋಟೆಲಿನಲ್ಲಿ ಉಳಿದುಕೊಂಡಿದ್ದಾನೆ; ಅವನ ಗೆಳೆಯನಿಗೆ ಈ ಊರಲ್ಲಿ ಏನೋ ಕೆಲಸವಿದೆಯಂತೆ. ಬಹುಶಃ ಬ್ಯುಸಿ ಇರಬೇಕು, ಅದಕ್ಕೇ ಫೋನ್ ಎತ್ತುತ್ತಿಲ್ಲ ಅನಿಸುತ್ತೆ. ಸಾಯಂಕಾಲ ನೇರ ಪಾರ್ಟಿಗೇ ಬರುತ್ತೇನೆ ಎಂದು ಹೇಳಿದ್ದಾನೆ" ಎಂದು ಬಾತ್‌ರೂಮಿಗೆ ನಡೆದ. ಉಚ್ಚೆಗೆ ಕೂತಾಗ ಬರುವುದು ಸ್ವಲ್ಪ ಕಷ್ಟ ಎನಿಸಿತು. ವಯಸ್ಸು ಐವತ್ತು ದಾಟಿತಲ್ಲವೇ? ಪ್ರಾಸ್ಟೇಟ್ ಗ್ರಂಥಿ ಸ್ವಲ್ಪ ದೊಡ್ಡದಾಗಲು ಶುರುವಾಗಿರಬಹುದು ಎಂದುಕೊಂಡ.

ಇಂದು ಸಾಯಂಕಾಲ ಆರು ಗಂಟೆಗೆ ತಮ್ಮ ಮದುವೆಯ ರಜತ ಮಹೋತ್ಸವದ ಪಾರ್ಟಿ. ಗಂಡ ಹೆಂಡತಿ ಸೇರಿ ಕಳೆದ ಆರು ತಿಂಗಳಿಂದ ತಯಾರಿ ನಡೆಸಿದ್ದರು; ಹೋಟೆಲ್ ರಾಮಡಾದಲ್ಲಿ ಐವತ್ತು ಜನರಿಗೆ ಅದ್ದೂರಿ ಪಾರ್ಟಿಯನ್ನು ಸಜ್ಜು ಮಾಡಿದ್ದರು. ಅದು ಸರಿಯಾಗಿ ಶನಿವಾರ ಬೇರೆ ಬಂದಿತ್ತು. ಇಂಗ್ಲೆಂಡಿಗೆ ಬಂದಾಗಿನಿಂದ ಇಲ್ಲಿಯವರೆಗೆ ಪರಿಚಿತರಾದವರ ಪಟ್ಟಿ ಮಾಡಿ ಯಾರ್‍ಯಾರನ್ನು ಕರೆಯುವುದು ಎಂದು ಮೂರು ತಿಂಗಳ ಮೊದಲೇ ಆಮಂತ್ರಣ ಕೊಟ್ಟಿದ್ದರು. ಬೆಂಗಳೂರಿಗೆ ಹೋದಾಗ 'ತಮನ್ನಾ ಬೂಟಿಕ್'ನಲ್ಲಿ ಪದ್ಮಜಾಳಿಗೆ ಲಕ್ಷಾಂತರ ರೂಪಾಯಿ ಕೊಟ್ಟು ಕಸ್ಟಮ್ ಮೇಡ್ ಡಿಸೈನರ್ ತೊಡುಗೆ ಮಾಡಿಸಿದ್ದ. ಪ್ರಾಣೇಶ ರಾಲ್ಫ್ ಲಾರೆನ್‌ನ ಪರ್ಪಲ್ ಕಲೆಕ್ಷನ್ ಸೂಟ್ ತೆಗೆದುಕೊಂಡಿದ್ದ.

ಇವತ್ತಿನ ಪಾರ್ಟಿಯಷ್ಟೇ ವೈಭವಯುತವಾಗಿ, ತಮ್ಮ ಮದುವೆಯ ರಜತ ಮಹೋತ್ಸವನ್ನು ಬಂಧುಬಳಗದವರನ್ನು ಸೇರಿಸಿ, ತಿರುಪತಿಯಲ್ಲಿ ಬ್ರಹ್ಮೋತ್ಸವ ಮಾಡಿ ಆಚರಿಸುವ ಆಸೆ, ಪದ್ಮಜಾಳಿಗೆ; ಆಮೇಲೆ ಇಬ್ಬರೇ ಮಂತ್ರಾಲಯಕ್ಕೆ ಹೋಗಿ ಒಂದು ವಾರ ರಾಯರ ಸೇವೆ ಮಾಡುವ ಅಭೀಪ್ಸೆ; ಹಾಗಂತ ಎರಡೂ ಕಡೆ ಬೇಡಿಕೊಂಡಿದ್ದಳು ಕೂಡ. ಆ ವಿಷಯದಲ್ಲಿ ಇಬ್ಬರಿಗೂ ಜಗಳವಾಗುತ್ತಲೇ ಇತ್ತು. ತಾನು ತಿರುಪತಿಗೆ ಮಂತ್ರಾಲಯಕ್ಕೆ ಅಷ್ಟೆಲ್ಲ ದಿನ ಬರಲು ಸಾಧ್ಯವೇ ಇಲ್ಲ, ಬಂದರೂ ದಿಂಡರಿಕೆ ಉರುಳುವುದು, ಅಲ್ಲಿನ ಮಡಿ–ಮೈಲಿಗೆಗಳನ್ನು ಪಾಲಿಸುವುದು ತನ್ನಿಂದ ಸಾಧ್ಯವೇ ಇಲ್ಲ ಎಂದು ಇವನು, ನೀನು ಬರದಿದ್ದರೆ ಬಿಡುವುದಿಲ್ಲ, ಇಬ್ಬರೂ ಸೇರಿಯೇ ಇದನ್ನೆಲ್ಲ ಮಾಡಲೇಬೇಕು ಎಂದು ಅವಳು; ಹಗ್ಗ ಹರಿದಿರಲಿಲ್ಲ, ಕೋಲು ಮುರಿದಿರಲಿಲ್ಲ.

ಹಾಗೆಂದು ಪದ್ಮಜಾ ಕರ್ಮಠ ಮಡಿ ಮಾಡುವ ಹೆಂಗಸೇನಲ್ಲ. ಜಮಖಂಡಿಯಲ್ಲಿ ನೇಮನಿಷ್ಠ ಮಾಡುವ ಮನೆಯಲ್ಲಿ ಹುಟ್ಟಿ ಬೆಳೆದ ಪದ್ಮಜಾ ಬಿ.ಎ. ಮುಗಿಸಿ, ಧಾರವಾಡದಲ್ಲಿ ದೊಡ್ಡಪ್ಪನ ಮನೆಯಲ್ಲಿ ಇದ್ದುಕೊಂಡು ಇಂಗ್ಲಿಷ್ ಎಂ.ಎ. ಮಾಡಿದ್ದಳು. ಬೆಂಗಳೂರನ್ನೂ ನೋಡಿರದ ಹುಡುಗಿ ಪ್ರಾಣೇಶನನ್ನು ಮದುವೆಯಾಗುತ್ತಿದ್ದಂತೆ ಆಗಿನ ನಕಾಶೆಯಲ್ಲಿ ಹುಡುಕಿದರೂ ಸಿಗದ ಸ್ಕಾಟ್‌ಲ್ಯಾಂಡಿನ ಇನ್‌ವರ್‌ನೆಸ್ ಎಂಬ ವಿಚಿತ್ರ ಹೆಸರಿನ ಊರಿಗೆ ನಡುಗುವ ಚಳಿಯಲ್ಲಿ ಬಂದು ಇಳಿದಿದ್ದಳು. ಈಗ ಇಂಗ್ಲೆಂಡಿನವರಂತೆಯೇ ಬಟ್ಟೆ ಹಾಕುತ್ತಾಳೆ, ಇಂಗ್ಲೆಂಡಿನ ಇಂಗ್ಲಿಷ್ ಎಕ್ಸೆಂಟನ್ನೂ ಸುಮಾರಾಗಿ ಕಲಿತಿದ್ದಾಳೆ. ಇಂಗ್ಲೆಂಡಿನ ಸಂಸ್ಕೃತಿಯನ್ನು ಸಾಕಷ್ಟು ಅರ್ಥ ಮಾಡಿಕೊಂಡಿದ್ದಾಳೆ. ಸೀರೆ ಸಲ್ವಾರ್ ಈಗ ಏನಿದ್ದರೂ ಹಬ್ಬ ಹರಿದಿನ, ಭಾರತೀಯ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದರೆ ಮಾತ್ರ. ಆದರೂ ಇದುವರೆಗೂ ಮಾಂಸವನ್ನೂ ಆಲ್ಕೋಹಾಲನ್ನೂ ಮುಟ್ಟಿಲ್ಲ. ದಿನಾ ಬೆಳಗ್ಗೆ ಎದ್ದು ಸ್ನಾನ ಮಾಡಿ ದೇವರ ಮುಂದೆ ದೀಪ ಹಚ್ಚಿ, 'ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ' ಎಂದು ವಿಜಯದಾಸರ ಕವಚವನ್ನು ಹೇಳುವುದನ್ನೂ ಬಿಟ್ಟಿಲ್ಲ (ತಿಂಗಳಲ್ಲಿ ಮೂರು ದಿವಸ ಬಿಟ್ಟು). ರಾಮನವಮಿ, ರಾಯರ ಆರಾಧನೆ, ಗಣೇಶ ಚತುರ್ಥಿ, ತುಳಸಿ ಲಗ್ನಗಳನ್ನು ತಪ್ಪದೇ ಮಾಡುತ್ತಾಳೆ. ಆದರೆ, ಗಂಡ ಮಾಂಸ ತಿನ್ನುತ್ತಾನೆ, ವಿಸ್ಕಿ ಕುಡಿಯುತ್ತಾನೆ, ಮಗನಿಗೂ ಕಲಿಸಿದ್ದಾನೆ. ಅಷ್ಟೇ ಅಲ್ಲ, ಅವನಿಗೆ ದೇವರಿಲ್ಲ, ದಿಂಡರಿಲ್ಲ, ಸಂಧ್ಯಾವಂದನೆಯಿಲ್ಲ, ಜನಿವಾರ ಕೂಡ ಹಾಕಿಕೊಳ್ಳುವುದಿಲ್ಲ. ಇಂಥ ನಾಸ್ತಿಕ ಬಾಗಲಕೋಟೆಯ ಪ್ರಕಾಂಡ ಪಂಡಿತರ ಮನೆಯಲ್ಲಿ ಅದು ಹೇಗೆ ಹುಟ್ಟಿದನೋ